ಸಿಸಿ ನಂಃ 170/2025
ಸಿ.ಡಬ್ಲೂ 15/ಪಿ.ಡಬ್ಲೂ 8

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕರೆಪ್ಪ ಹಂಚಿನಮನಿ |
| ತಂದೆಯ ಹೆಸರು | ಃ | ನಿಂಗಪ್ಪ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಕೇಲಗೇರಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 12-12-2025

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಅಪಘಾತದಲ್ಲಿ ಮರಣ ಹೊಂದಿದ ಮರೆವ್ವ ನನ್ನ ತಾಯಿ. ಅದೇ ರೀತಿ ಅಪಘಾತದಲ್ಲಿ ಮರಣ ಹೊಂದಿದ ರಮೇಶ ನನ್ನ ದೊಡ್ಡಮ್ಮನ ಮಗ . ದಿಃ 24.10.2024 ನಾನು ಮನೆಯಲ್ಲಿದ್ದಾಗ ಬೆಃ 4.40 ರ ಸಮಯಕ್ಕೆ ಚಾಸಾ-1 ರವರು ದೂರವಾಣಿಯಲ್ಲಿ ಮಾಹಿತಿ ನೀಡಿ ಸಂಪಿಗೆ ನಗರದ ಬಸ್ ಸ್ಟಾಪ ಹತ್ತಿರ ಅಪಘಾತವಾದ ಬಗ್ಗೆ ತಿಳಿಸಿದರು . ಅದೇ ವೇಳೆಗೆ ಚಾಸಾ-9 ರವರು ಪೋನ ಮಾಡಿ ಅಪಘಾತದಲ್ಲಿ ರಮೇಶ ಮತ್ತು ನನ್ನ ತಾಯಿ ಮರೆವ್ವ ಸ್ಥಳದಲ್ಲಿ ಮರಣ ಹೊಂದಿದರು ಎಂದು ತಿಳಿಸಿದರು . ಮಾಹಿತಿ ತಿಳಿದು ನಾನು ಧಾರವಾಡದ ಸಿವಿಲ್ ಆಸ್ಪತ್ರೆಗೆ ಹೋದೆನು . ನಂತರ ಗಾಯಾಳುಗಳನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಿದೆವು . ಅದೇ ದಿನ ಬೆಳಗ್ಗೆ ಕಿಮ್ಸ ಆಸ್ಪತ್ರೆಯಲ್ಲಿ ಪ್ರಣವ ಅಸುನಿಗಿದನು . ನಂತರ ದಿಃ 28.10.2024 ರಂದು ಇನ್ನೊಬ್ಬ ಗಾಯಾಳು ಪ್ರಥ್ವಿ ಇತನು ಮರಣ ಹೊಂದನು . ಈ ಕುರಿತು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

ಸಿಸಿ ನಂಃ 170/2025
ಸಿ.ಡಬ್ಲೂ 15/ಪಿ.ಡಬ್ಲೂ 8

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಮಾಹಿತಿ ಬಂದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಲಾಗಿ ರಮೇಶ ಮತ್ತು ನನ್ನ ತಾಯಿ ಮರೆವ್ವ ಇವರ ಶವಗಳು ಅಪಘಾತ ಸ್ಥಳದಲ್ಲಿ ಬಿದ್ದಿದ್ದವು ಎಂದರೆ ಸರಿ . ನಾನು ಅಪಘಾತ ಸ್ಥಳಕ್ಕೆ ಹೋಗಿ ಗಾಯಗೊಂಡ ರೇಣುಕಾ ಇವರನ್ನು ವಿಚಾರಿಸಿದಾಗ ಸದರಿಯವರು ಬ್ಯಾಡಗಿಗೆ ಹೋಗುವ ಸಲುವಾಗಿ ಧಾರವಾಡದ ರೈಲ್ವೆ ನಿಲ್ದಾಣಕ್ಕೆ ಹೋಗಲು ರಮೇಶ ಇವರಿಗೆ ಸೇರಿದ ರಿಕ್ಷಾ ನಂಃ ಕೆಎ-25/ಡಿ-3725 ರಲ್ಲಿ ಹೊರಟಿರುವಾಗ ಗೋವಾ ರಸ್ತೆಯ ಸಂಪಿಗೆ ನಗರದ ಬಸ್ ಸ್ಟಾಪ್ ಹತ್ತಿರ ಒಬ್ಬ ಟ್ರಕ ಚಾಲಕ ತಮ್ಮ ರಿಕ್ಷಾದ ಎದುರುಗಡೆಯಿಂದ ಕೆಲಗೇರಿ ಕಡೆಗೆ ಅತೀ ವೇಗ ಮತ್ತು ಅಜಾಗರುಕತೆಯಿಂದ ಚಲಾಯಿಸಿಕೊಂಡು ಬಂದು ತಮ್ಮ ರಿಕ್ಷಾಕ್ಕೆ ಡಿಕ್ಕಿಪಡಿಸಿದನು ಎಂದು ತಿಳಿಸಿದರು ಎಂದರೆ ಸರಿ . ನಂತರ ರಸ್ತೆಯಲ್ಲಿ ಹೊರಟಿದ್ದ ಜನರು ಗಾಯಗೊಂಡವರನ್ನು ರಿಕ್ಷಾದಿಂದ ಹೊರ ತೆಗೆದು ನೋಡಲಾಗಿ ರಮೇಶ ಇವರ ತಲೆಯ ಮೇಲೆ ಟ್ರಕ ಹಾದು ಹೋಗಿರುವುದು ಕಂಡು ಬಂತು ಎಂದರೆ ಸರಿ . ನನ್ನ ತಾಯಿ ಮರೆವ್ವ ಇವರಿಗೆ ತಲೆಗೆ ಭಾರಿ ಪ್ರಮಾಣ ಪೆಟ್ಟಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದರು ಎಂದರೆ ಸರಿ . ರೇಣುಕಾ ಇವರ ಕೈ ಕಾಲಿಗೆ ಮತ್ತು ತಲೆಗೆ ಪೆಟ್ಟಾಗಿತ್ತು ಎಂದರೆ ಸರಿ . ಪ್ರಣವ ಇವರಿಗೆ ಬಲವಾದ ಗಾಯವಾಗಿ ಕಾಲು ತುಂಡಾಗಿತ್ತು ಎಂದರೆ ಸರಿ . ಇನ್ನೊಬ್ಬ ಮಗ ಪೃಥ್ವಿ ಇವನ ತಲೆಗೆ ಬಲವಾದ ಪೆಟ್ಟಾಗಿತ್ತು ಎಂದರೆ ಸರಿ . ಅಲ್ಲಿ ಜನ ಸೇರುವುದನ್ನು ನೋಡಿ ಟ್ರಕ ಚಾಲಕ ತನ್ನ ಟ್ರಕನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುವುದಾಗಿ ತಿಳಿಯಿತು ಎಂದರೆ ಸರಿ . ಅಪಘಾತಪಡಿಸಿದ ಟ್ರಕ ನಂಃ ನೋಡಲಾಗಿ ಜಿಎ-06/ಟಿ -9097 ಎಂದು ಇತ್ತು ಎಂದರೆ ಸರಿ . ಪೃಥ್ವಿ ಇವರ ಶವಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು ಸಹಕರಿಸಿದ್ದೇನೆ ಎಂದರೆ ಸರಿ . ಈ ಎಲ್ಲಾ ಮಾಹಿತಿಗಳನ್ನು ದಿಃ 29.10.2024 ರಂದು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ .

ಸಿಸಿ ನಂಃ 170/2025
ಸಿ.ಡಬ್ಲೂ 15/ಪಿ.ಡಬ್ಲೂ 8

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಅಪಘಾತವನ್ನು ನಾನು ನೋಡದೇ ಇದ್ದರೂ ರೇಣುಕಾ ಇವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ೦ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.